ಶ್ರೀ ಎಸ್. ನಿಜಲಿಂಗಪ್ಪ.—ನಿರೀಕ್ಷೆಗಿಂತ ಹೆಚ್ಚಿನ ಫಲಿತಾಂಶವಾಗಿದೆ; ಅದರೂ ಅದಷ್ಟು ಬೇಗ ಪೂರೈಕೆ ಮಾಡಬೇಕೆಂಬುದು ಸರಕಾರದ ಉದ್ದೇಶ.

Foodgrain Production during the Second Plan.

*Q.—400. Sri ANNARAO GANAMUKHI (Afzalpur).—

Will the Government be pleased to state :—

(*a*) the figures of foodgrain production during the Second Plan and the additional production potential crop-rise during the years 1961-62, 1962-63 and the heads under which it is planned;

(*b*) Whether the increase is keeping pace with the schedule ;

(*c*) the estimated requirements of cereals and pulses for the estimated population during the year 1962-63;

(*d*) whether the agricultural production plan is expected to double the annual rate of foodgrain production fixed in the Third Plan in the State?

A.—Sri M. V. KRISHNAPPA (Minister for Revenue).—

(*a*) (i) The year-wise production of foodurains during the Second Plan is as follows:

		tons.
1956—57	...	32,79,000
1957—58	...	37,07,000
1958—59	...	38,16,000
1959—60	...	40,04,000
1960—61	...	35,87,000

(ii) The target of the Third plan of additional foodgrains is 10.02 lakh tons and the break-up *viz.* the heads under which it is planned is as follows:

			(lakh tons)
1.	Major and Medium irrigation	...	0.99
2.	Minor irrigation programmes	...	0.25
			(lakh tons)
3.	Land Development and Soil conservation and dry farming practices	...	0.32
4.	Fertilisers and manures	...	5.51
5.	Improved seeds	...	0.88
6.	Improved Agricultural practices	...	0.85
7.	Other measures	...	1.22
	Total	...	10.02

(SRI M. V. KRISHNAPPA)

(*b*) The increase has not kept pace with the schedule.

(*c*) Cereals	...	32.10	lakh metric tons
Pulses	...	6.42	,, ,,
Total	...	38,52	,, ,,
Add 10 percent requirement for live stock.	...	3,85	,, ,,
Grand total	...	42.37	,, ,,

(*d*) Provision has been made in the Third Five Year Plan for increased Agricultural production particularly foodgrains in order to achieve self-sufficiency in food.

ಶ್ರೀ ಅಣ್ಣಾರಾವ್ ಗಣಮುಖಿ.—1960—61 ರಲ್ಲಿ 35,87,000 ಟನ್ ಎಂದು ತಿಳಿಸಿದ್ದೀರಿ. ಇಲ್ಲಿಗೆ ಅಗತ್ಯವಾಗಿರುವುದೆಷ್ಟು?

† ಶ್ರೀ ಎಂ. ವಿ. ಕೃಷ್ಣಪ್ಪ.—ಉತ್ತರದಲ್ಲಿ ಕೊಟ್ಟಿರುವುದಕ್ಕಿಂತ ಮೂರು ನಾಲ್ಕು ಟನ್ ಹೆಚ್ಚಾಗಬೇಕಾಗಿತ್ತು.

ಶ್ರೀ ಅಣ್ಣಾರಾವ್ ಗಣಮುಖಿ.—ಗುರಿ 42 ಲಕ್ಷಟನ್ ಎಂದು ಹೇಳಿದ್ದೀರಿ. ಅದನ್ನುಮುಟ್ಟಲು ಇನ್ನೂ 6ಲಕ್ಷ ಟನ್ ಬೇಕಾಗುತ್ತದಲ್ಲ?

ಶ್ರೀ ಎಂ. ವಿ. ಕೃಷ್ಣಪ್ಪ.—ನಾಲ್ಕುಲಕ್ಷ ಟನ್.

Sri ANNARAO GANAMUKHI.—May I know what is the anticipated population in 1965-66 and the requirement of food grains?

ಶ್ರೀ ಎಂ. ವಿ. ಕೃಷ್ಣಪ್ಪ.—ಮೂರನೆಯ ಯೋಜನೆಯ ಕೊನೆಯಲ್ಲಿ 2ಕೋಟಿ 75 ಲಕ್ಷ ಇರಬಹುದೆಂದು ಅಂದಾಜು ಹಾಕಿದೆ. ದಿವಸಕ್ಕೆ ಒಬ್ಬರಿಗೆ 18 ಔನ್ಸಿನ ಪ್ರಕಾರ ಸುಮಾರು 47 ಲಕ್ಷ ಟನ್ ಬೇಕಾಗುತ್ತದೆ. ಮೂರನೆಯ ಯೋಜನೆಯ ಗುರಿ 48 ಲಕ್ಷಟನ್; ಸ್ವಾವಲಂಬನೆಗಿಂತ ಸ್ವಲ್ಪ ಹೆಚ್ಚಾಗಬೇಕೆಂದಿದೆ.

ಶ್ರೀ ಟಿ. ಎನ್. ಮಾದಪ್ಪಗೌಡ.—ಇಷ್ಟುಟನ್ ಎಂದು ಹೇಳುತ್ತೀರಿ, ಇದನ್ನು ಹೇಗೆ ಲೆಕ್ಕಹಾಕುತ್ತೀರಿ ?

ಶ್ರೀ ಎಂ. ವಿ. ಕೃಷ್ಣಪ್ಪ.—ಸಾಮಾನ್ಯ ಗಣಿತದ ಪ್ರಕಾರ. ಪಹಣಿ ಲೆಕ್ಕಪೂರ್ವದಿಂದ ನಡೆದುಕೊಂಡುಬಂದಿದೆ, ಅದನ್ನು ಪೂರ್ತಿಯಾಗಿ ನಂಬಬೇಕಾಗಿಲ್ಲ. ನ್ಯಾಷನಲ್ ಸ್ಯಾಂಪಲ್‌ಸರ್ವೆ ಎಂದು ಇಂಡಿಯಾ ಸರ್ಕಾರದಲ್ಲಿ ಇಟ್ಟುಕೊಂಡಿದ್ದಾರೆ. ಗ್ರಾಮಗಳಿಗೆ ಹೋಗಿ ಒಂದೊಂದು ಬೆಳೆಯನ್ನೂ ಸ್ಯಾಂಪಲ್ ಸರ್ವೆಯನ್ನು ಕ್ರಾಪ್‌ಕಟಿಂಗ್ ಮೆಥಡ್‌ನಲ್ಲಿ ಮಾಡುತ್ತಾರೆ. ಅದರ ಪ್ರಕಾರ ಸಾಮಾನ್ಯವಾಗಿ ಸರಿಯಾಗಿರುತ್ತದೆ. ಅದರಲ್ಲಿ ಅಂಡರ್‌ಎಸ್ಟಿಮೇಟ್ ಇರುತ್ತದೆಯೇ ಹೊರತು ಓವರ್ ಎಸ್ಟಿಮೇಟ್ ಇರುವುದಿಲ್ಲ;

Sri ANNARAO GANAMUKHI.—What is the amount spent on the various inputs like fertilizers and manures and improved implements during the first three years of the Plan?

ಶ್ರೀ ಎಂ. ವಿ. ಕೃಷ್ಣಪ್ಪ.—ಮೂರನೆಯ ಯೋಜನೆಯಲ್ಲಿ ನಮ್ಮ ಟಾರ್ಜೆಟ್ ಹತ್ತುಲಕ್ಷಟನ್ ಆಹಾರವನ್ನು ಹೆಚ್ಚುಮಾಡಬೇಕೆಂಬುದು. ಒಂದೊಂದು ಬಾಬಿನಿಂದ ಇಷ್ಟಿಷ್ಟು ಎಂದು ಲೆಕ್ಕ ಹಾಕಿದ್ದೇವೆ. ಮೊದಲು ಮೇಜರ್ ಮತ್ತು ಮೀಡಿಯಮ್ ನೀರಾವರಿಯಲ್ಲಿ ಹೆಚ್ಚುಹಣ ಖರ್ಚು ಮಾಡಿ ರೈತರಿಗೆ ನೀರುಕೊಟ್ಟು ಐದುವರ್ಷಗಳಲ್ಲಿ ಒಂದು ಲಕ್ಷಟನ್ ಹೆಚ್ಚಿಸಬೇಕೆಂದಿದೆ. ಇನ್ನು ಇಲ್ಲಿ ಕೊಟ್ಟಿರುವಂತೆ ಬೇರೆ ಬೇರೆ ಮಾರ್ಗಗಳಿಂದ ಒಟ್ಟು ಹತ್ತುಲಕ್ಷ ಟನ್ ಮಾಡಬೇಕೆಂದಿದೆ. ಈಗ ಮೂರುವರ್ಷ ಮುಗಿದಿರುವುದರಿಂದ ಇಷ್ಟಾಗಿದೆ.

Sri B. R. SUNTHANKAR.–In answer to (*b*), it is said that the increase has not kept pace with the schedule. There has been a short-fall in production in 1960–61 which is less than 1957–58. May I know whether the Government have investigated into the causes and what steps Government is taking to step-up agricultural production ?

Sri M. V. KRISHNAPPA.—In answer to (a), we have given the production for five years. If you look at the figures, it will give an indication as to how the five-year cycle of Indian agriculture is. If the production is less in 1960-61, it may be due to failure of rains. Next year, it has gone up to 43 lakh tons. This year it may not be so good. Next year we are expecting very good rains and we may have a bumper crop. In a cycle of five years in Indian agriculture, there is one good year, one bad year, one neither good nor bad year and two indifferent years.

ಶ್ರೀ ಎನ್. ಹುಚ್ಚಮಾಸ್ತಿಗೌಡ.—ಐದುವರ್ಷಕ್ಕೆ ಬರುವ ಸೈಕಲ್ ಅಲ್ಲದೆ ಬೇರೆ ಏನಾದರೂ ಕಾರಣ ಇದೆಯೇ ಎನ್ನುವುದನ್ನು ಕಂಡು ಹಿಡಿದು ಅದಕ್ಕೆ ತಕ್ಕಕ್ರಮ ತೆಗೆದುಕೊಂಡಿದ್ದೀರಾ?

ಶ್ರೀ ಎಂ. ವಿ. ಕೃಷ್ಣಪ್ಪ.—ಸಾಮಾನ್ಯವಾಗಿ ಪ್ಲಾನ್ ಪ್ರಕಾರ ಕೆಲಸಮಾಡುತ್ತದೆ. ಮೂರನೇ ಪಂಚವಾರ್ಷಿಕ ಯೋಜನೆಯಲ್ಲಿ 3 ಕೋಟಿ ಟನ್ ಫುಡ್ ಪ್ರೊಡಕ್ಷನ್ ಮಾಡಬೇಕೆಂದು ಇದ್ದುದನ್ನು ಈಗ 9 ಕೋಟಿ ಟನ್ ಎಂದು ಇಟ್ಟುಕೊಂಡಿದ್ದೇವೆ. ಪ್ಲಾನ್ ಪ್ರಕಾರ ಉತ್ಪತ್ತಿ ಬರುವುದಕ್ಕೆ ಸರಕಾರ ಎಲ್ಲ ಕ್ರಮ ತೆಗೆದುಕೊಳ್ಳುತ್ತೇವೆ.

Sri S. SIVAPPA.—Has it come to the notice of the government that in spite of government spending crores of rupees for the agricultural production the expected out put has not been realised; is it not due to the lack of fundmental policy making?

Sri M. V. KRISHNAPPA.—Out of my experience since last 12 years I am handling this portfolio both here and at the Centre, I feel we are not spending as much money as is required to be spent on this.

ಶ್ರೀ ಡಿ. ಎಂ. ಸಿದ್ದಯ್ಯ.—'other measures' ಅಂದರೆ ಅವು ಯಾವುದು ಎಂಬುದನ್ನು ಹೇಳುತ್ತೀರಾ?

ಶ್ರೀ ಎಂ. ವಿ. ಕೃಷ್ಣಪ್ಪ.—ಉತ್ತರದಲ್ಲಿ ಹೇಳಿರುವ ಆರುಬಿಟ್ಟು ಉಳಿದದ್ದು ಎಲ್ಲಾ ಆದರ್ ಮೇಜರ್ಸ್‌ಗೆ ಸೇರುತ್ತದೆ.

Sri ANNARAO GANAMUKHI.—May I know Sir, whether in fixing the target under the Third plan, you have taken into consideration the influx of population into the State from Madras, Andhra ?

Sri M. V. KRISHNAPPA.—This is one important factor that this State has not taken into consideration perhaps. That is why, the plan targets in this country is not being realised, although actually the production is going up. That is perhaps due to at least 1 or 2 lakh of tamil population coming into the State and most of them are rice eaters. Even the Cabinet thought of it. This is one of the factors. Hereafter, whenever we fix the targets, we must take into account the influx of population into the State from Tamilnad, Andhra and Kerala States.

ಶ್ರೀ ಎಸ್. ಶಿವಪ್ಪ.—ದೇಶದಲ್ಲಿ ಇಂದು ಜನಗಳ ಉತ್ಪತ್ತಿ ಜಾಸ್ತಿಯಾಗಿದೆ. ಈ ವಿಷಮ ಪರಿಸ್ಥಿತಿಯನ್ನು ಗಮನಕ್ಕೆ ತೆಗೆದುಕೊಂಡು ಅದನ್ನು ಎದುರಿಸಲು ಯಾವ ಕ್ರಮ ಸರಕಾರ ತೆಗೆದು ಕೊಂಡಿದ್ದೀರಿ ?

ಶ್ರೀ ಎಂ. ವಿ. ಕೃಷ್ಣಪ್ಪ.—ಆಹಾರ ಉತ್ಪತ್ತಿಗಿಂತ ಜನಗಳ ಉತ್ಪತ್ತಿ ಜಾಸ್ತಿಯಾಗಿದೆ. ಆಹಾರ ಉತ್ಪತ್ತಿ ಜಾಸ್ತಿ ಮಾಡುವುದಕ್ಕೆ ವ್ಯವಸಾಯ ಇಲಾಖೆ ಸೂಕ್ತ ಕ್ರಮ ತೆಗೆದುಕೊಂಡಿದೆ. ಜನಗಳ ಉತ್ಪತ್ತಿ ಬಗ್ಗೆ ಹೆಲ್ಥ್ ಡಿಪಾರ್ಟ್‌ಮೆಂಟ್ ಕೆಲವು ಕ್ರಮ ತೆಗೆದುಕೊಂಡಿದೆ.

Sri ANNARAO GANAMUKHI.—Do the Government consider that Mysore will be self-sufficient in the matter of rice-production by the end of Third Plan because of the influx of population ?

Sri M. V. KRISHNAPPA.—According to the third plan, it was meant that by 1965-66, Mysore wanted to reach self-sufficiency. But as stated earlier, our population is expected to go up to 275 lakhs and at the rate of 18 ounces, we are likely to require about 45 lakhs of tons of rice. The plan target was fixed at 48 lakhs of tons. If there is good rainfall, I am sure, Mysore is likely to reach self-sufficiency at the end of the Third Plan.

ಶ್ರೀ ಇ. ನಾರಾಯಣಗೌಡ.—ರೈತ ಬೆಳೆಯತಕ್ಕ ಬೆಳೆಗೆ ಸರಿಯಾದ ಬೆಲೆ ಸಿಕ್ಕದೆ ನಿರುತ್ಸಾಹ ನಾಗುವುದರಿಂದ ಕಡಿಮೆ ಬೆಳೆಯುತ್ತಾನೆ. ಆದುದರಿಂದ ರೈತನಿಗೆ ನ್ಯಾಯವಾದ ಬೆಲೆ ಕೊಡು ವುದಕ್ಕೆ ಸರಕಾರ ಏನು ಕ್ರಮ ತೆಗೆದುಕೊಂಡಿದೆ ?

ಶ್ರೀ ಎಂ. ವಿ. ಕೃಷ್ಣಪ್ಪ.—ಹಿಂದಕ್ಕೆ ಆ ಕಾರಣ ಇತ್ತು. ಆದರೆ ಈ ವರ್ಷ ಜನವರಿಯಲ್ಲಿಯೇ ಭತ್ತಕ್ಕೆ ಜಾಸ್ತಿ ಬೆಲೆ ಬಂದಿದೆ. ಸಾಮಾನ್ಯವಾಗಿ ರೈತನಿಗೆ ಸರಿಯಾದ ಬೆಲೆ ಅವನು ಬೆಳೆಯುವ ಬೆಳೆಗೆ ಬರುವುದಿಲ್ಲ ಎಂಬುದನ್ನು ನಾನು ಒಪ್ಪಿಕೊಳ್ಳುತ್ತೇನೆ. ರೈತನಿಗೆ ನ್ಯಾಯವಾದ ಬೆಲೆ ದೊರೆಯುವಂತೆ ಪ್ರಯತ್ನ ಮಾಡುತ್ತೇವೆ. ಈ ವರ್ಷ ಆಹಾರ ಪದಾರ್ಥಗಳಿಗೆ ಬೆಲೆ ಜಾಸ್ತಿ ಇದೆ.

ಶ್ರೀ ಎನ್. ಹುಚ್ಚಮಾಸ್ತಿಗೌಡ.—ಹೆಚ್ಚು ಆಹಾರ ಉತ್ಪತ್ತಿ ಮಾಡುವುದಕ್ಕೆ ಜಪಾನ ದೇಶದಲ್ಲಿ ಉಪಯೋಗಿಸುವ ಸಣ್ಣ ಸಣ್ಣ ಟ್ರ್ಯಾಕ್ಟರ್ಸ್ ಇಲ್ಲಿಯ ರೈತರಿಗೆ ಒದಗಿಸುವುದಕ್ಕೆ ಗಮನ ಕೊಟ್ಟು ಸುಧಾರಿತ ಉಪಕರಣಗಳನ್ನು ಒದಗಿಸುತ್ತೀರಾ ?

ಶ್ರೀ ಎಂ. ವಿ. ಕೃಷ್ಣಪ್ಪ.—ಬೆಂಗಳೂರಿನಲ್ಲಿ ಪ್ರಾರಂಭ ಮಾಡಿದ ಅಂಥ ಒಂದು ಸ್ಟೋರಿಗೆ ಮಾನ್ಯ ಮುಖ್ಯಮಂತ್ರಿಗಳು ಭೇಟಿ ಕೊಟ್ಟಿದ್ದಾರೆ. ಇಂಥ ಉಪಕರಣಗಳಿಂದ ರೈತರಿಗೆ ಅನುಕೂಲ ವಾಗುತ್ತದೆ. ಮೈಸೂರು ರಾಜ್ಯದಲ್ಲಿ ಈ ಉಪಕರಣಗಳನ್ನು ತಯಾರಿಸುವುದಕ್ಕೆ ಒಂದು ಲೈಸೆನ್ಸ್ ಕೊಡುತ್ತೇವೆ. ಹೈದರಾಬಾದ್‌ನಲ್ಲಿ ಒಂದು ಫ್ಯಾಕ್ಟರಿಯಲ್ಲಿ ಇಂಥ ಉಪಕರಣಗಳು ತಯಾರಾಗಿ ಈಗ ಮಾರ್ಕೆಟ್ಟಿಗೆ ಬಂದಿವೆ. ಇನ್ನೊಂದು ಫ್ಯಾಕ್ಟರಿಗಾಗಿ ದಿಲ್ಲಿಯ ಹತ್ತಿರ ಲೈಸೆನ್ಸ್ ಹಿಂದಕ್ಕೆ ಕೊಟ್ಟಿದೆ.

ಶ್ರೀ ಎಚ್. ಆರ್. ಕೇಶವಮೂರ್ತಿ.—ವ್ಯವಸಾಯ ಕಸಬು ಜನರ ದೃಷ್ಟಿಯಲ್ಲಿ ಆಕರ್ಷಣೀಯ ವಾಗಿಲ್ಲ. ಜನರು ಕೈಗಾರಿಕೆಗಳ ಕಡೆಗೆ ಹೋಗುತ್ತಿದ್ದಾರೆ. ಆದುದರಿಂದ ವ್ಯವಸಾಯ ಆಕರ್ಷಣೀಯವಾಗುವುದಕ್ಕೆ ಸರಕಾರ ಏನಾದರೂ ಏರ್ಪಾಡು ಮಾಡಿದ್ದಾರೆಯೇ ಅಥವಾ ಇನ್ನು ಮುಂದಾದರೂ ಏನಾದರೂ ಮಾಡುತ್ತಾರೆಯೇ ?

ಶ್ರೀ ಎಂ. ವಿ. ಕೃಷ್ಣಪ್ಪ.—ಹಳ್ಳಿಯ ಜೀವನ ಆಕರ್ಷಣೀಯವಾಗಿ ಮಾಡುವುದಕ್ಕೆ ಸಿನೆಮಾ ಮಂದಿರ ಏರ್ಪಾಡು ಮಾಡಿ ಮನರಂಜನೆಗೆ ಅವಕಾಶ ಮಾಡಿಕೊಡಬೇಕಾಗಿದೆ. ಯಾಕಂದರೆ ಅದಕ್ಕಾಗಿ ಅವರು ಪಟ್ಟಣಕ್ಕೆ ಬರಬೇಕಾಗುತ್ತದೆ. ಹಳ್ಳಿಯನ್ನು ಆಕರ್ಷಣೀಯವಾಗಿ ಮಾಡಿದರೆ ವಿದ್ಯಾವಂತ ತರುಣರು ಹಳ್ಳಿಗೆ ಹೋಗುತ್ತಾರೆ. ಅದಲ್ಲದೆ ಹಳೇ ಕಾಲದ ನೇಗಿಲು ಮುಂತಾದ ಉಪಕರಣಗಳ ಬದಲು ಅತ್ಯಾಧುನಿಕ ಹೊಸ ಉಪಕರಣಗಳನ್ನು ಒದಗಿಸಿದರೆ ಅವರು ವ್ಯವಸಾಯ ಮಾಡಲು ಮುಂದೆ ಬರುತ್ತಾರೆ. ಹಳೇ ಕಾಲದ ಕಪ್ಲಿ ಯಾರೂ ಉಪಯೋಗಿಸುವುದಿಲ್ಲ. ಆದ್ದರಿಂದ ಪಂಪ್‌ಸೆಟ್ ಒದಗಿಸಬೇಕಾಗಿದೆ. ಅದೇ ರೀತಿ ಗಾಡಿ ಹೋಗಿ ಲಾರಿ ಬರುತ್ತದೆ. ದೇಶ ಇತ್ತೀಚೆಗೆ ಬದಲಾವಣೆಯಾಗುತ್ತಿದೆ. ವಿದ್ಯಾವಂತ ತರುಣರು ವ್ಯವಸಾಯ ಮಾಡಲು ಹೋಗುವ ಕಾಲ ಒಂದು ದಿನ ಬರುತ್ತದೆ.

ಶ್ರೀ ಎಚ್. ಆರ್. ಕೇಶವಮೂರ್ತಿ.—ಅದಕ್ಕೆ ಎಷ್ಟು ವರ್ಷ ಕಾಲ ಬೇಕು ?

ಶ್ರೀ ಎಂ. ವಿ. ಕೃಷ್ಣಪ್ಪ.—ನೀವು ನೋಡದೇ ಇದ್ದರೂ ನಿಮ್ಮ ಮಕ್ಕಳು ಅದನ್ನು ನೋಡು ತ್ತಾರೆ.

ಶ್ರೀ ಜೆ. ದೇವಯ್ಯ.—ಜಾನುವಾರಗಳಿಗೆ ಧಾನ್ಯ ಕೊಡಲು ಏನಾದರೂ ವ್ಯವಸ್ಥೆ ಮಾಡುತ್ತೀರಾ ?

ಶ್ರೀ ಎಂ. ವಿ. ಕೃಷ್ಣಪ್ಪ.—ಜಾನುವಾರುಗಳಿಗೆ ಒಂದೊಂದು ಪ್ರಾಂತದಲ್ಲಿ ಒಂದೊಂದು ಧಾನ್ಯ ಕೊಡುತ್ತಾರೆ. ಸಾಮಾನ್ಯವಾಗಿ ನಮ್ಮ ಪ್ರದೇಶದಲ್ಲಿ ಹುರುಳಿ ಬೆಳೆಯುವುದರಿಂದ ದನಗಳಿಗೆ ಹುರುಳಿ ಕೊಡುತ್ತಾರೆ. ಎತ್ತುಗಳಿಗೆ ಹಸುಗಳಿಗೆ ಹುರುಳಿ ಕೊಡುವುದು ತಮಗೆ ಗೊತ್ತಿದೆ. ಬೇರೆ ಪ್ರಾಂತದಲ್ಲಿ ಬೇರೆ ಧಾನ್ಯ ಎತ್ತುಗಳಿಗೆ ಕೊಡುತ್ತಾರೆ. ಕೆಲವು ಕಡೆ ಎತ್ತುಗಳಿಗೆ ಜೋಳ ಕೊಡುತ್ತಾರೆ. ಕೇಂದ್ರ ಸರಕಾರ ಇದನ್ನೆಲ್ಲಾ ಗಮನದಲ್ಲಿಟ್ಟುಕೊಂಡಿದ್ದಾರೆ.

ಶ್ರೀ ಎ. ಜೆ. ದೊಡ್ಡಮೇಟಿ.—ಅಕ್ಕಿ ಉಪಯೋಗಿಸುವ ನೆರೆ ರಾಜ್ಯದ ಜನರು ನಮ್ಮ ರಾಜ್ಯದಲ್ಲಿ ವಾಸ ಮಾಡಲು ಬರುತ್ತಿದ್ದಾರೆ ಅದರಿಂದ ಅಕ್ಕಿ ದೊರೆಯುವುದು ಕಡಿಮೆಯಾಗಿದೆ ಎಂದು ಹೇಳಿದಿರಿ. ಪ್ರತಿ ವರ್ಷ ನಮ್ಮ ರಾಜ್ಯಕ್ಕೆ ಹೊರಗಿನಿಂದ ಬರತಕ್ಕಂಥ ಇಂಥ ಜನರ ಸಂಖ್ಯೆ ಎಷ್ಟು ?

ಶ್ರೀ ಎಂ. ವಿ. ಕೃಷ್ಣಪ್ಪ.—ಸೆನ್ಸಸ್ ಇದರ ಬಗ್ಗೆ ತೆಗೆದುಕೊಂಡಿಲ್ಲ. ಒಂದು ಲಕ್ಷಕ್ಕೆ ಅದು ಕಡಿಮೆಯಿಲ್ಲ. ಬೆಂಗಳೂರು ನಗರಕ್ಕೆ 60-70 ಸಾವಿರ ಜನ ಬರುತ್ತಾ ಇದ್ದಾರೆ. ಬೆಳಿಗ್ಗೆ ಎದ್ದು ರೈಲ್ವೇ ಸ್ಟೇಷನ್ನಿಗೆ ಹೋದರೆ ಇದು ಗೊತ್ತಾಗುತ್ತದೆ. ಕೇರಳದಿಂದ ಬಹು ಜನರು ಮಲೆನಾಡು ಪ್ರದೇಶಕ್ಕೂ ಕೊಡಗಿನಲ್ಲಿರುವ ಕಾಫಿ ಪ್ಲಾಂಟೇಶನ್ನಿಗೂ ಬರುತ್ತಾ ಇದ್ದಾರೆ. ಮಾಂಡ್ಯ ಡಿಸ್ಟ್ರಿಕ್ಟಿಗೂ ಬರುತ್ತಾ ಇದ್ದಾರೆ. ರಸ್ತೆ ಕೆಲಸ ಮಾಡುವವರು, ಬಿಲ್ಡಿಂಗ್ ಕಟ್ಟುವವರು, ಪ್ರೊಜೆಕ್ಟಿನಲ್ಲಿ ಕೆಲಸ ಮಾಡುವವರು ಹೊರಗಡೆಯಿಂದ ಬಂದಿರುವ ಜನರೇ ಇದ್ದಾರೆ. ಆದ್ದರಿಂದ ಒಂದು ಲಕ್ಷ ಜನಸಂಖ್ಯೆ ಎಂದು ಲೆಕ್ಕಕ್ಕೆ ತೆಗೆದುಕೊಳ್ಳಬಹುದು.

ಶ್ರೀ ಎ. ಜೆ. ದೊಡ್ಡಮೇಟಿ.—ಹೊರಗಿನವರು ಇಲ್ಲಿಗೆ ಬರುವುದಕ್ಕೆ ಅಂಥ ಹೆಚ್ಚಿನ ಆಕರ್ಷಣೆ ಏನಿದೆ ?

ಶ್ರೀ ಎಂ. ವಿ. ಕೃಷ್ಣಪ್ಪ.—ಅವರು ಕಷ್ಟಪಟ್ಟು ದುಡಿಯತಕ್ಕಂಥ ಜನ. ನಮ್ಮ ಜನ ಕಷ್ಟಪಟ್ಟು ದುಡಿಯುವುದಕ್ಕೆ ಇಷ್ಟಪಡುವುದಿಲ್ಲ. ನಮ್ಮ ರಸ್ತೆ ಪ್ರೊಜೆಕ್ಟ್ ಕೆಲಸ ಅವರೇ ಮಾಡುತ್ತಾರೆ. ಅವರನ್ನು ನಾವು ದೂಷಿಸಬೇಕಾಗಿಲ್ಲ. ಅವರು ಇರದೇ ಇದ್ದರೆ ನಮ್ಮ ಪ್ರೊಜೆಕ್ಟ್ ಕೆಲಸಗಳು ಆಗುತ್ತಾ ಇರಲಿಲ್ಲ.

3-30 P.M.

ಶ್ರೀ ಜೆ. ದೇವಯ್ಯ.—ಜಾನುವಾರುಗಳು ವ್ಯವಸಾಯಕ್ಕೆ ಬಹಳ ಮುಖ್ಯ. ಆದರೆ ಹುರುಳಿ ಬೆಲೆ, ಜೋಳದ ಬೆಲೆ ಹೆಚ್ಚಾಗಿರುವುದರಿಂದ, ಜಾನುವಾರುಗಳಿಗೆ ಬೇಕಾದ ಆಹಾರ ಪದಾರ್ಥಗಳಿಗೆ ಸಬ್ಸಿಡಿ ಕೊಡುವಂತೆ ಅವಕಾಶ ಮಾಡಿಕೊಡುತ್ತೀರ ?

ಶ್ರೀ ಎಂ. ವಿ. ಕೃಷ್ಣಪ್ಪ.—ಸ್ವಾಮಿ, ಜನಗಳಿಗೆ ಬೇಕಾದ ಆಹಾರ ಧಾನ್ಯಗಳಿಗೇ ಕೊಡುತ್ತಾ ಇಲ್ಲ, ಇನ್ನು ಜಾನುವಾರುಗಳಿಗೆ ಎಲ್ಲಿಂದ ಕೊಡುವುದು ?

ಶ್ರೀ ಟಿ. ಡಿ. ದೇವೇಂದ್ರಪ್ಪ.—ಇಷ್ಟು ಬೆಳೆದರೂ ಆಹಾರ ಧಾನ್ಯ ಕಡಿಮೆಯಾಗುತ್ತಾ ಇದೆ. ವ್ಯವಸಾಯ ಇಲಾಖೆಯಲ್ಲಿ ಚೆನ್ನಾಗಿ ಕೆಲಸ ಮಾಡದೆ, ಆಹಾರ ಧಾನ್ಯಕ್ಕೆ ರೋಗ ಬಂದರೆ ಔಷಧಿ ಒದಗಿಸಿಕೊಡದೇನೆ, ವ್ಯವಸಾಯಕ್ಕೆ ಸಂಬಂಧಪಟ್ಟ ಸಾಮಾನುಗಳನ್ನು ಒದಗಿಸದೆ, ಗೊಬ್ಬರ ಸಪ್ಲೈ ಮಾಡದೆ ಇರುವುದರಿಂದ, ಆಹಾರ ಧಾನ್ಯ ಕಡಿಮೆಯಾಗುತ್ತಿದೆಯಲ್ಲವೆ ?

ಶ್ರೀ ಎಂ. ವಿ. ಕೃಷ್ಣಪ್ಪ.—ಇಲ್ಲ. ಇಲಾಖೆಯವರಿಗೆ ಎಷ್ಟು ಪ್ರಮಾಣದಲ್ಲಿ ಹಣ ಕೊಟ್ಟಿದ್ದೇವೆಯೊ ಅಷ್ಟು ಪ್ರಮಾಣದಲ್ಲಿ ಸಹಾಯ ಮಾಡುತ್ತಿದ್ದಾರೆ. ಆದರೆ ವ್ಯವಸಾಯಗಾರರ ಇನ್‌ವೆಸ್ಟ್‌ಮೆಂಟು ಕಡಿಮೆ. ಪ್ಯಾಲೆಸ್ಟೈನ್, ಇಸ್‌ರೇಲ್ ಮುಂತಾದ ಜಾಗಗಳಲ್ಲಿ ಬಹಳ ಬೆಳೆ ಬೆಳೆಯುತ್ತಾರೆ, ಏಕೆಂದರೆ ವಿಪರೀತ ಇನ್‌ವೆಸ್ಟ್ ಮಾಡುತ್ತಾರೆ, ಖರ್ಚು ಮಾಡುತ್ತಾರೆ. Because the agriculturist there could invest more on his lands, he grows very good crops, whereas a poor farmer who cannot get money, who cannot dig a well, who has to struggle hard to get a loan, cannot grow more. So investment is more important in agriculture as it is important in other things.

ಶ್ರೀ ಕೆ. ಪಿ. ರೇವಣ್ಣಸಿದ್ದಪ್ಪ.—ಜನಸಂಖ್ಯೆಗೆ ಅನುಗುಣವಾಗಿ ನೀರಾವರಿ ವ್ಯವಸಾಯಕ್ಕೆ ಬೇಕಾದಂಥ ವಿದ್ಯುಚ್ಛಕ್ತಿ ಒದಗಿಸದೆ ಇರುವುದು ಒಂದು ಕಾರಣವಲ್ಲವೆ ? ಎರಡನೆಯದಾಗಿ ಬೆಳೆಗಳಿಗೆ ಪ್ರಾಣಿಗಳ ಕಾಟ ಜಾಸ್ತಿಯಾಗಿದೆ. ಅದರಲ್ಲಿಯೂ ಕೋತಿಗಳದು ಜಾಸ್ತಿಯಾಗಿದೆ. ಅವುಗಳನ್ನು ಕೊಂದು ಹಾಕುವುದಕ್ಕೆ ಹಿಂದು ಜನಗಳು ಒಪ್ಪುವುದಿಲ್ಲ. ಅವಕ್ಕೆ ಸ್ಟೆರಿಲೈಸ್ ಮಾಡುವ ವ್ಯವಸ್ಥೆ ಮಾಡುತ್ತೇವೆಂದು ಹೇಳಿದ್ದಿರಿ, ಇದುವರೆಗೂ ಆಗಿಲ್ಲ.

ಶ್ರೀ ಎಂ. ವಿ. ಕೃಷ್ಣಪ್ಪ.—ಅವರು ಬಹಳ ಮುಖ್ಯ ವಿಷಯ ಹೇಳಿದರು. ಕೋತಿಗಳದು ಬಹಳ ಹಾವಳಿ ಇದೆ ನಮ್ಮ ದೇಶದಲ್ಲಿ. ಆಂಜನೇಯನ ದೇವಸ್ಥಾನ ಇಲ್ಲದ ಊರೇ ಇಲ್ಲ. ಊರ ಮುಂಚೆ ಮೊದಲು ಸಿಗುವುದು ಹನುಮಂತರಾಯನ ದೇವಸ್ಥಾನ. ಕೋತಿಗಳ ಹಾವಳಿ ಬಹಳ ಇದೆ. ಕೋತಿಗಳನ್ನು ಏನಾದರೂ ಮಾಡೋಣ ಎಂದರೆ ವಿರೋಧ ಮಾಡುತ್ತಾರೆ. ಚೈನಾ ದೇಶದಲ್ಲಿ ಕ್ಷಾಮ. ಬಂದಾಗ ಅಲ್ಲಿ ಜನ ಕೋತಿಗಳನ್ನೇ ಪೂರ್ತಿ ತಿಂದುಬಿಟ್ಟರು. ಇನ್ನೊಂದು ಸಾರಿ ಅಲ್ಲಿ ಕ್ಷಾಮ ಬಂದಾಗ ಚೀನೀಯರು ಇಲಿಗಳನ್ನು ತಿಂದು ಅವುಗಳನ್ನು ಪೂರೈಸಿಬಿಟ್ಟರು. ಆ ದೇಶದಲ್ಲಿ ರೈತರ ಶತ್ರುಗಳಾದಂಥ ಕ್ರಿಮಿಕೀಟಗಳು ಇಲ್ಲ. ಹಾಗೇ ನಿಮಗೂ ಲೈಸೆನ್ಸು ಕೊಡುತ್ತೇವೆ ತಾವೂ ಏನಾದರೂ ಮಾಡುವ ಹಾಗಿದ್ದರೆ......(ನಗು).

ಶ್ರೀ ಟಿ. ಡಿ. ದೇವೇಂದ್ರಪ್ಪ.—ಹಂದಿಗಳು ಜಾಸ್ತಿಯಾಗಿ ಪೈರು ಬಹಳ ಲುಕ್ಸಾನಗಾಗುತ್ತದೆ. ಕಬ್ಬು ಬೆಳೆಯನ್ನು ಲೂಟಿ ಮಾಡುತ್ತಿವೆ. ಹಂದಿಗಳಿಗೆ ಒಂದು ಔಷಧಿ ಹೊಡೆದುಬಿಟ್ಟು ಸಾಯುವುದಕ್ಕೆ ಉಪಾಯ ಕಂಡುಹಿಡಿಯದಿದ್ದರೆ, ಬಹಳ ತೊಂದರೆಯಾಗುತ್ತದೆ; ಲಕ್ಷಾಂತರ ಟನ್ ಆಹಾರ ಹಾಳಾಗುತ್ತಿದೆ.

ಶ್ರೀ ಎಂ. ವಿ. ಕೃಷ್ಣಪ್ಪ.—ಮಲೆನಾಡು ಪ್ರಾಂತ್ಯದಲ್ಲಿ, ಪಾಪ, ಹಂದಿಗಳನ್ನು ಕೋವಿ ಕಟ್ಟಿ ನಾಶ ಮಾಡುತ್ತಾರೆ. ಕೋವಿಗಳಿಗೆ ಫ್ರೀ ಲೈಸೆನ್ಸು ಕೊಡುತ್ತಾರೆ. ಅನೇಕರು ಹಂದಿಗಳನ್ನು ಕೊಂದು ಮನೆಯಲ್ಲಿ ಉಪಯೋಗಿಸುತ್ತಾರೆ. ನೀವು ಬಹುಶಃ ಹಾಗೆ ಮಾಡದೆ ಇದ್ದು, ನಿಮಗೆ ತೊಂದರೆ ಇರಬೇಕು.

ಶ್ರೀ ಟಿ. ಎನ್. ಮಾದಪ್ಪಗೌಡ.—ಬೆಳೆಗೆ ಸರಿಯಾದ ಬೆಲೆ ಸಿಗುತ್ತಿದೆ ಎಂದು ಹೇಳಿದಿರಿ. ರೈತರು ಖರ್ಚು ಮಾಡುವುದು ಎಷ್ಟು ? ಅದಕ್ಕೆ ಪ್ರತಿಫಲವಾಗಿ ಈಗ ಸಿಗುತ್ತಿರುವ ಬೆಲೆ ಸರಿಯೆ ? ಹೀಗಾದರೆ ರೈತರ ಗತಿ ಏನು ?

ಶ್ರೀ ಎಂ. ವಿ. ಕೃಷ್ಣಪ್ಪ.—ಬೆಳೆಗಳಿಗೆ ಎಕನಾಮಿಕ್ ಪ್ರೈಸ್ ಅಂತ ಹೇಳಿಬಿಟ್ಟು ಎಲ್ಲರೂ ತೀರ್ಮಾನ ಮಾಡಿದ್ದಾರೆ. ಮಂಡ್ಯದಲ್ಲಿ ಹಳವಗೋಲು ಭತ್ತ ಪಲ್ಲಕ್ಕೆ 32-34 ರೂಪಾಯಿನಂತೆ ಮಾರಿದರೆ, ಅದು ನ್ಯಾಯವಾದ ಬೆಲೆ ರೈತನಿಗೆ ಎಂದು ಹೇಳುತ್ತಾರೆ. ರೈತರು 38-40 ರೂಪಾಯಿವರೆಗೂ ಪ್ರಾರಂಭದಲ್ಲಿ ಮಾರುತ್ತಾರೆ. ಮುಂದಕ್ಕೆ ಅಷ್ಟಕ್ಕೇ ಮಾರುವುದು ಕಷ್ಟ. ಅಕ್ಕಿ ಉಪಯೋಗಿಸುವ ಜನ ಬಹಳ ಸುಸ್ತಾಗಿದ್ದಾರೆ. ಬೆಲೆಗಳು ಏರುತ್ತಿವೆ ಎಂಬ ಕೂಗು ಕೇಳಿಬರುತ್ತಿದೆ.

Sri ANNARAO GANAMUKHI.—In order to provide some incentive to the farmer and stimulate production, have the Government of India suggested to the Government of Mysore to raise the prices of food-grains by means of subsidisation ?

ಶ್ರೀ ಎಂ. ವಿ. ಕೃಷ್ಣಪ್ಪ.—ಹೌದು. ಅವರಿಗೆ ಪ್ರೊಕ್ಯೂರ್‌ಮೆಂಟ್ ಪ್ರೈಸ್ ಬಹಳ ಕಡಿಮೆ ಫಿಕ್ಸ್ ಮಾಡಿದೆ. ರೈತರ ಹತ್ತಿರ ಸರಕಾರ ತೆಗೆದುಕೊಂಡಾಗ ಬಹಳ ಕಡಿಮೆ ಬೆಲೆ ಕೊಡುತ್ತಾ ಇದ್ದೇವೆ. ಈ ವರ್ಷ ಫುಡ್ ಮಿನಿಸ್ಟರುಗಳ ಕಾನ್‌ಫರೆನ್ಸಿನಲ್ಲಿ ಈ ತಿಂಗಳಿನಿಂದಲೇ 2 ರೂಪಾಯಿ 1 ಬಂಗಾಳದ ಮಣಕ್ಕೆ ಜಾಸ್ತಿ ಕೊಡಬೇಕೆಂದು ತೀರ್ಮಾನ ಮಾಡಿದ್ದೇವೆ.

Sri ANNARAO GANAMUKHI.—Have the Government of India also suggested to the Government of Mysore to remit a portion of the land revenue so that they may grow more ?

Sri M. V. KRISHNAPPA.—We have no suggestion other than of increasing the value of procured foodgrains.

ಶ್ರೀ ಕುಂದೂರು ರುದ್ರಪ್ಪ.—ಇತ್ತೀಚೆಗೆ ರಾಗಿ, ಜೋಳ, ಬತ್ತ, ಶೇಂಗಾಯಿ, ಮೆಣಸಿನ ಕಾಯಿ, ಪ್ರತಿಯೊಂದು ಆಹಾರಧಾನ್ಯಕ್ಕೂ ರೋಗ ಜಾಸ್ತಿಯಾಗುತ್ತಾ ಇದೆ. ಇದರಿಂದ ರೈತರಿಗೆ ತುಂಬ ತೊಂದರೆಯಾಗುತ್ತಾ ಇರುವುದು ತಮ್ಮ ಗಮನಕ್ಕೆ ಬಂದಿದೆಯೇ ? ಈ ರೀತಿ ಪೈರಿಗೆ ಬಹಳ ರೋಗ ಬಂದು ರೈತರು ಹಾಳಾಗುತ್ತಿದ್ದಾರೆ. ತುಂಬ ಕಷ್ಟದಲ್ಲಿದ್ದಾರೆ. ಇದಕ್ಕೆ ಅಗ್ರಿಕಲ್ಚರರ್ ಎಕ್ಸ್‌ಟೆನ್ಸನ್ ಆಫೀಸರು ಜವಾಬ್ದಾರರೋ, ಅಗ್ರಿಕಲ್ಚರಲ್ ಡೈರೆಕ್ಟರು ಜವಾಬ್ದಾರರೋ ? ಅವರಮೇಲೆ ಏನು ಕ್ರಮ ತೆಗೆದುಕೊಳ್ಳುತ್ತಾರೆ ?

ಶ್ರೀ ಎಂ. ವಿ. ಕೃಷ್ಣಪ್ಪ.—ರೋಗಗಳು ಯಾವತ್ತೂ ಇದ್ದುವು. ಹೊಸ ರೋಗಗಳು ಬರುತ್ತಾ ಇಲ್ಲ. ಹಿಂದೆ, ಈಗ ಬಂದಿರುವ ರೋಗಗಳಿಗೆ ಔಷಧಿ ಇರಲಿಲ್ಲ. ಈಗ ಸಾಧ್ಯವಾದಷ್ಟು ಔಷಧ ಗಳನ್ನು ಪ್ರಪಂಚದಲ್ಲಿ ಸ್ವಲ್ಪ ಕಂಡುಹಿಡಿದಿದ್ದಾರೆ, ಅದರ ಉಪಯೋಗವನ್ನೂ ಪಡೆಯುತ್ತಿದ್ದಾರೆ; ಇನ್‌ಸೆಕ್ಟಿಸೈಡ್ಸ್ ಸರಕಾರ ತರಿಸಿಕೊಡುತ್ತಿದ್ದಾರೆ, ಉದಾಹರಣೆಗೆ ಹಾವೇರಿ ತಾಲ್ಲೂಕಿನ 20-25 ಹಳ್ಳಿಗಳಲ್ಲಿ ಚಿಟ್ಟೆಯಿಂದ ಬಹಳ ತೊಂದರೆಯಾಗುತ್ತಿತ್ತು, ಪೂರ್ವದಿಂದಲೂ ಅದನ್ನು ಯಾರೂ ಗಮನಕ್ಕೆ ತೆಗೆದುಕೊಂಡಿರಲಿಲ್ಲ. ಈ ವರ್ಷ 50-60 ಗ್ರಾಮಗಳಲ್ಲಿ ಅಲ್ಲಿ ಚಿಟ್ಟೆಯನ್ನು ಪೂರ್ತಿಯಾಗಿ ನಾಶಮಾಡಿದೆ. ಸರಕಾರದವರು ಮ್ಯಾಸೀವ್ ಕ್ಯಾಂಪೇನು ಮಾಡಿ ಡಸ್ಟಿಂಗ್ ಮಾಡಿಸಿದರು. ಪ್ರತಿಯೊಂದು ರೋಗ ಬಂದಾಗ ಎಲ್ಲೆಲ್ಲಿ ಸಾಧ್ಯವೋ ಅಲ್ಲಲ್ಲಿ ಔಷಧಗಳನ್ನು ಕೊಟ್ಟು, ಒಟ್ಟಿನಲ್ಲಿ ಇಲಾಖೆಯವರು ಕಷ್ಟಪಟ್ಟು ಅದನ್ನು ನಿವಾರಣೆ ಮಾಡಲು ವ್ಯವಸ್ಥೆ ಮಾಡಿದ್ದಾರೆ. ಸ್ವಲ್ಪ ರೋಗಗಳು ಅಲ್ಲಲ್ಲಿ ಎದ್ದು ಕಾಣುತ್ತಿವೆ. ಅದಕ್ಕೆ ಸರಕಾರ ಏನೂ ಮಾಡುವುದಕ್ಕಾಗುವುದಿಲ್ಲ.

ಶ್ರೀ ಎಸ್. ಸುಬ್ಬಯ್ಯನಾಯಕ್.—ಆಹಾರಧಾನ್ಯಗಳನ್ನು ಬೆಳಸದೆ, ವಾಣಿಜ್ಯ ಬೆಳೆಗಳನ್ನು ಹೆಚ್ಚು ಮಾಡುತ್ತಿರುವ ಕಾರಣದಿಂದ, ಆಹಾರೋತ್ಪತ್ತಿಗೆ ಅನ್ಯಾಯವಾಗುತ್ತಿದೆ. ಅದಕ್ಕೆ ಏನು ಮಾಡುತ್ತೀರ ?

ಶ್ರೀ ಎಂ. ವಿ. ಕೃಷ್ಣಪ್ಪ.—ವಾಣಿಜ್ಯ ಬೆಳೆಗಳೂ ಬಹಳ ಮುಖ್ಯ. ಒಂದಾನೊಂದು ಕಾಲದಲ್ಲಿ ಆಹಾರ ಬೆಳೆಗಳು ಮುಖ್ಯ ಎಂಬ ಆರ್ಗುಮೆಂಟಿತ್ತು. ಈಗ ಹಣ ಗಳಿಸಬೇಕಾಗಿದೆ. ಸುಮಾರು 500 ಕೋಟಿ ಫಾರಿನ್ ಎಕ್ಸ್‌ಚೇಂಜ್ ಅರ್ನ್ ಮಾಡುತ್ತಿದ್ದೇವೆ, ಎಣ್ಣೆ ಬೀಜ 89 ಕೋಟಿ ರೂಪಾಯಿನಷ್ಟು ಎಕ್ಸ್‌ಪೋರ್ಟ್ ಮಾಡುತ್ತಿದ್ದೇವೆ. ಶುಗರ್ 40 ಕೋಟಿ, ಕಾಶ್ಯುನಟ್ಸ್ 30 ಕೋಟಿ, ಕಾಫಿಸೀಡ್ಸ್ 45 ಕೋಟಿ ರೂಪಾಯಿನಷ್ಟು ಎಕ್ಸ್‌ಪೋರ್ಟ್ ಮಾಡುತ್ತಾ ಇದ್ದೇವೆ. ಬಾಳೇಹಣ್ಣು ಎಕ್ಸ್‌ಪೋರ್ಟ್ ಮಾಡುತ್ತಿದ್ದೇವೆ. We have to earn foreign exchange to build up our industries in the country so that at least our future generation will have enough of work and production in the country, instead of looking to their own stomaches.

ಶ್ರೀ ಎಚ್. ಆರ್. ಕೇಶವಮೂರ್ತಿ.—ಈಗ ಭತ್ತದ ಬೆಳೆಗೆ ಹೆಚ್ಚು ಪ್ರಮಾಣದಲ್ಲಿ ಖಾಹಿಲೆ ಬಂದು, ಒಣಗಿಹೋಗಿ ಬಹಳ ಲುಕ್ಸಾನು ಆಗುತ್ತಾ ಇದೆ. ಹೆಲಿಕಾಪ್ಟರುಗಳಿಂದ ಸ್ಪ್ರೇ ಮಾಡು ವುದು ಕಂಡುಹಿಡಿದಿದ್ದಾರೆ, ಸಸಿ ಸಂರಕ್ಷಣ ಅಂಗದವರು. ಅದರ ಉಪಯೋಗವನ್ನು ರೈತರಿಗೆ ದೊರಕಿಸಿಕೊಡಲು ಪ್ರಯತ್ನ ಮಾಡುತ್ತೀರ ?

ಶ್ರೀ ಎಂ. ವಿ. ಕೃಷ್ಣಪ್ಪ.—ಹೆಲಿಕಾಪ್ಟರು ಇಡದೆ ಇದ್ದರೂಕೂಡ, ಬೇರೆ ಪ್ಲೇನುಗಳನ್ನು ಉಪಯೋಗಿಸಲು ಅವಕಾಶವಿದೆ. ಹತ್ತಿ ಬೆಳೆಗೆ ರೋಗ ಬಂದು ನಾಶವಾಗುತ್ತಿದ್ದ ಸಂದರ್ಭದಲ್ಲಿ, ಅದು ಎಲ್ಲೆಲ್ಲಿ ತಲೆದೋರಿತ್ತೋ ಅಲ್ಲಲ್ಲಿ ಬೊಂಬಾಯಿನ ಒಂದು ಕಂಪೆನಿಯವರು ಬಂದು ಸಹಾಯ ನೀಡಿದ್ದರು. ಅದನ್ನು ದೊಡ್ಡ ಪ್ರಮಾಣದಲ್ಲಿ ಮಾಡುವ ಶಕ್ತಿ ಸರಕಾರಕ್ಕೆ ಬಂದಿಲ್ಲ. ಸೆಂಟ್ರಲ್ ಗವರ್ನ್‌ಮೆಂಟಿನವರು ಏರೋಪ್ಲೇನು ಇಟ್ಟಿದ್ದಾರೆ. ಬೊಂಬಾಯಿಯ ಒಂದು ಕಂಪೆನಿಯೂ ಪ್ಲೇನು ಇಟ್ಟಿದೆ. ಬೇರೆ ಏರಿಯಾಗಳಿಗೆ ಬೇಕಾದರೆ ಅವರು ಬಂದು ಸ್ಪ್ರೇ ಮಾಡುತ್ತಾರೆ. ಸರಕಾರದವರು ಆ ಖರ್ಚನ್ನು ಸಬ್‌ಸಿಡೈಸ್ ಮಾಡುತ್ತಾರೆ.

Assistance given to the Bus owners, when the Road Transport was nationalised in Hassan District.

*Q.—509. Sri B. H. LAKSHMANIAH (Belur)—

Will the Government be pleased to state :—

(*a*) the number of bus owners along with the Number of buses that were running when Road Transport in Hassan District was nationalised ;

(*b*) the nature of assistance given to these bus owners when the Road Transport in Hassan District was nationalised ;